೨೦೨೦-೨೧

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** M/s Vish Wind Infrastrukture LLP ಕಂಪನಿಗೆ ಗದಗ ಜಿಲ್ಲೆಯ ರೋಣ ಮತ್ತು ನರಗುಂದ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ 50 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲು ಹಂಚಿಕೆ ನೀಡುವ ಬಗ್ಗೆ.

ಸಂ. 845
ದಿನಾಂಕ 26.5.2020

**ಓದಲಾಗಿದೆ:**
1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತ ಇವರ ಏಕ ಕಡತ ಸಂಖ್ಯೆ:1811
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ದಿನಾಂಕ:11.03.2020 ರ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

**ಪ್ರಸ್ತಾವನೆ :-**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಏಕ ಕಡತದಲ್ಲಿ M/s Vish Wind Infrastrukture LLP ಕಂಪನಿಗೆ ಗದಗ ಜಿಲ್ಲೆಯ ರೋಣ ಮತ್ತು ನರಗುಂದ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ 50 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲು ಹಂಚಿಕೆ ನೀಡುವಂತೆ ಕೋರಿದ ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ಸದರಿ ಸ್ಥಳವು M/s Orange Renewable Power Private Limited ಕಂಪನಿಯವರಿಗೆ ಗದಗ ಜಿಲ್ಲೆಯ ರೋಣ ಮತ್ತು ನರಗುಂದ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ತತ್ವಶ: ಅನುಮೋದನೆಗೆ ದಿನಾಂಕ :10.12.2015ರಂದು ನಡೆದ ಹಂಚಿಕೆ ಸಮಿತಿಯಲ್ಲಿ ಶಿಫಾರಸ್ಸುಗೊಂಡು, ಇನ್ನೂ ತತ್ವಶ: ಅನುಮೋದನೆ ಪತ್ರ ಪಡೆಯದ ಯೋಜನೆಯ ಸ್ಥಳದ ಮೇಲೆಯೇ M/s Vish Wind Infrastrukture LLP ಕಂಪನಿಯವರು 50 ಮೆ.ವ್ಯಾ. ಸಾಮರ್ಥ್ಯಕ್ಕೆ ಹಂಚಿಕೆ ನೀಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುವುದಾಗಿ ತಿಳಿಸುತ್ತಾ, M/s Vish Wind Infrastrukture LLP ಕಂಪನಿಯು ದಿನಾಂಕ:23.02.2016ರಂದು ನೋಂದಾವಣೆಗೊಂಡಿದ್ದು, ಇದರ ನೋಂದಾಯಿತ ಕಚೇರಿಯು ಮಹಾರಾಷ್ಟ್ರದ ಮುಂಬೈನಲ್ಲಿ ಸ್ಥಾಪಿತಗೊಂಡಿದೆ. ಸದರಿಯವರ ನೆಟ್‌ವರ್ತ್ ದಿನಾಂಕ:31.03.2018ರ ಅಂತ್ಯಕ್ಕೆ ರೂ.352.72 ಕೋಟಿಗಳಾಗಿರುತ್ತದೆ ಎಂದು ಚಾರ್ಟೆಡ್ ಅಂಕೌಂಟೆಂಟ್‌ರವರು ದೃಢೀಕರಣ ಪತ್ರವನ್ನು ನೀಡಿರುತ್ತಾರೆ ಹಾಗೂ ಬ್ಯಾಲೆನ್ಸ್ ಶೀಟ್‌ಗಳನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಸದರಿ ಕಂಪನಿಯ ಮುಖ್ಯ ಕಾರ್ಯಚಟುವಟಿಕೆಗಳು ನವೀಕರಿಸಬಹುದಾದ ಇಂಧನ ಮೂಲಗಳಲ್ಲೊಂದಾದ ಪವಸ ವಿದ್ಯುತ್ ಯೋಜನೆಗಳಿಂದ ವಿದ್ಯುತ್ ಉತ್ಪಾದಿಸುವುದಾಗಿದೆ. ಪ್ರಸ್ತುತ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಸ್ವಂತ ಬಳಕೆ ಅಥವಾ ಮೂರನೇ ವ್ಯಕ್ತಿಗೆ ಮಾರಾಟ ಮಾಡುವುದಾಗಿ, ಸಂಬಂಧಿಸಿದ ಅರ್ಜಿ ಮತ್ತು ಡಿಪಿಆರ್ ಶುಲ್ಕವನ್ನು ಕೆ.ಆರ್.ಇ.ಡಿ.ಎಲ್.ಗೆ ಪಾವತಿಸಿರುವುದಾಗಿ ತಿಳಿಸಿರುತ್ತಾರೆ.

MD KREDL

M/s Vish Wind Infrastrukture LLP ಕಂಪನಿಗೆ ಗದಗ ಜಿಲ್ಲೆಯ ರೋಣ ಮತ್ತು ನರಗುಂದ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ 50 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲು ಯೋಜನೆಗೆ ಸಂಬಂಧಿಸಿದ ತಾಂತ್ರಿಕ ವಿವರಗಳು, ಸ್ಥಳದ ಮಾಹಿತಿ, ಅಕ್ಷಾಂಶ ಮತ್ತು ರೇಖಾಂಶ ಇನ್ನಿತರೆ ವಿವರಗಳೊಂದಿಗೆ ಈ ಕೆಳಕಂಡ ಶೆಡ್ಯೂಲ್‌ನಲ್ಲಿರುವಂತೆ ಸ್ವಂತ ಉಪಯೋಗಕ್ಕಾಗಿ/ ಮೂರನೇ ವ್ಯಕ್ತಿಗೆ ಮಾರಾಟ ಮಾಡುವ ಸಲುವಾಗಿ ಹಂಚಿಕೆ ಮಾಡಲು ಶಿಫಾರಸ್ಸಿನೊಂದಿಗೆ

...2

Wind Section
Inward No. 6155
Date:
Sig.

30/5

ಪ್ರಸ್ತಾವನೆಯನ್ನು ಹಂಚಿಕೆ ಸಮಿತಿ ಮುಂದೆ ಮಂಡಿಸಲು ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

**Geographical area description for 50 MW capacity wind power project**

| Sl. No | Toposheet No. | Proposed capacity in MW | Near by villages of the proposed area and district | Geographical area description of the project |
|---|---|---|---|---|
| 1 | 48M/10 | 50MW (62 Nos X 800 kW) | Hadli, Hadagali, Yavagal, Belavaniki, Kaujageri, Mallapur, Hire Mannur, Melmath, Hallur, Mudengudi, Kurahatti and Ron Villages of Ron &Naragund Taluks of Gadag district | The proposed area is surrounded by the point A, B, C, D, E, F and are held in the following Geographical co-ordinates as:<br><br>**Point A**:Lat: 15°40'20"N, Long: 75°30'0''E<br>**Point B**:Lat: 15°45'0"N, Long: 75°30'0''E<br>**Point C**:Lat: 15°45'0"N, Long: 75°45'0''E<br>**Point D**:Lat: 15°42'9.68"N, Long: 75°45'0''E<br>**Point E**:Lat: 15°42'9.68"N, Long: 75°36'53.85''E<br>**Point F**:Lat: 15°40'20"N, Long: 75°36'53.85''E<br><br>Ridge Peaks: 545, 562, 547, 565, 579, 551, 569, 567, 583, 592, 585, 571, 576, 549 & 568m Amsl. |
| | **Total** | **50 MW** | | |

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ: 11.03.2020 ರಂದು ನಡೆದ ಹಂಚಿಕೆ ಸಮಿತಿ ಸಭೆಯು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, M/s Orange Gadag Wind Power Private Limited, ರವರು ಸಾಮರ್ಥ್ಯ ಹೆಚ್ಚಳಕ್ಕೆ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಅಂಗಸಂಸ್ಥೆಯು SPV ಕಂಪನಿಯಾಗದ ಹೊರತು ಸದರಿ ಕಂಪನಿಯ ನೆಟ್‌ವರ್ತನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು 15 ದಿನಗಳೊಳಗೆ ನೆಟ್‌ವರ್ತ್ ಮಾಹಿತಿಯನ್ನು ನೀಡುವಂತೆ ಕ್ರೆಡಲ್ ರವರು ನೀಡಿರುವ ನೋಟೀಸಿಗೆ ಸದರಿ ಕಂಪನಿಯವರು ನಿಗಧಿತ ಅವಧಿಯಲ್ಲಿ ನೆಟ್ ವರ್ತ್ ಮಾಹಿತಿ ಒದಗಿಸದೇ ಇದ್ದುದರಿಂದ ಹಾಗೂ ಸದರಿ ಕಂಪನಿಯವರು ಕ್ರೆಡಲ್‌ಗೆ ಕಾಲಕಾಲಕ್ಕೆ ಒದಗಿಸಿರುವ ಮಾಹಿತಿಯು ಮೂಲ ದಾಖಲೆಗಳಾಗದೇ ಅಗತ್ಯಕ್ಕೆ ತಕ್ಕಂತೆ ಮಾರ್ಪಡಿಸಿ ಸಲ್ಲಿಸಿರುವ ದಾಖಲೆಗಳಾಗಿರುತ್ತವೆ. ಈ ಮಾಹಿತಿಗಳು ಸದರಿ ಕಂಪನಿಯವರಿಗೆ ಪವನ ವಿದ್ಯುತ್ ಸಾಮರ್ಥ್ಯದ ಹಂಚಿಕೆಗೆ ಪರಿಗಣಿಸುವ ವಿಷಯದಲ್ಲಿ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಲು ತೊಡಕನ್ನುಂಟು ಮಾಡಿರುವುದನ್ನು ಹಂಚಿಕೆ ಸಮಿತಿಯು ಗಮನಿಸಿರುತ್ತದೆ. ದಿನಾಂಕ:10.12.2015 ರಂದು ನಡೆದ ಹಂಚಿಕೆ ಸಮಿತಿ ಸಭೆಯಲ್ಲಿ M/s Orange Renewable Power Private Limited, ರವರಿಗೆ ಗದಗ ಜಿಲ್ಲೆಯ ರೋಣ ಮತ್ತು ನರಗುಂದ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ತತ್ವಶಃ ಅನುಮೋದನೆಗೆ